ಡಿ.ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **17.01.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: ಪಿರ್ಯಾದುದಾರರ ಪರಃ ವಕೀಲರ ಮೂಲಕ ಃ</u>

ಪಿರ್ಯಾದುದಾರರು ನನ್ನ ವಿರುದ್ಧ ಯಾವ ಉದ್ದೇಶದಿಂದ ಪ್ರಕರಣ ದಾಖಲು ಮಾಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ನಿಪಿ 1 ರಲ್ಲಿ ಇರುವ ಸಹಿ ನನ್ನದು ಮತ್ತು ನಿಪಿ 1 ನನಗೆ ಸೇರಿದ್ದು ಎಂದರೆ ಸರಿಯಲ್ಲ. ನಿಪಿ 1 ಚೆಕ್ ನನಗೆ ಸೇರಿದ್ದಾಗಿದ್ದು ನಿಪಿ 1ಎ ಸಹಿ ನನ್ನದು ಎಂದರೆ ಸರಿಯಲ್ಲ. ನಾನು ಸಾಲದ ಮರುಪಾವತಿಗಾಗಿ ನಿಪಿ 1 ನ್ನು ಪಿರ್ಯಾದುದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಿಪಿ 1 ಚೆಕ್ ನನ್ನದಲ್ಲವೆಂದು ಮತ್ತು ನಿಪಿ 1ಎ ಸಹಿ ನನ್ನದಲ್ಲವೆಂದು ಹೇಳಿರುತ್ತೇನೆ. ನನ್ನ ವಿರುದ್ಧ ಪ್ರಸ್ತುತ ಪ್ರಕರಣವನ್ನು ಹೊರತುಪಡಿಸಿ, ಬೇರೆ ದೂರು ದಾಖಲಾಗಿರುವುದಿಲ್ಲ. ಪಕ್ಕದ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಚೆನ್ನೇಗೌಡ ಎಂಬುವವರು ದೂರನ್ನುದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹೆಚ್. ಶಿವಲಿಂಗೇಗೌಡ ಬಿನ್ ಸಣ್ಣೇಗೌಡ @ ಹನುಮೇಗೌಡ ಫೀಲ್ಡ್ ಮ್ಯಾನ್ ಚಾಮುಂಡೇಶ್ವರಿ ಶುಗರ್ ಲಿಮಿಟೆಡ್ ಎಂದರೆ ನನ್ನ ಹೆಸರು ಎಂದರೆ ನನ್ನ ತಂದೆಯ ಹೆಸರು ಹನುಮೇಗೌಡ ಅಗಿರುತ್ತದೆ. ಈಗ ನೋಡುತ್ತಿರುವ ದಾಖಲೆಯಲ್ಲಿ ಇರುವ ವಿಳಾಸ ನನ್ನದಾಗಿರುತ್ತದೆ. ಪಕ್ಕದ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 465/2023 ರಂತೆ ದಾವೆ ನನ್ನ ವಿರುದ್ಧ ನಡೆಯುತ್ತಿದೆ ಎಂದರೆ ಸರಿಯಲ್ಲ. ನಾನು ಸದರಿ ದಾವೆಯಲ್ಲಿ ವಕೀಲರನ್ನು ನೇಮಕ ಮಾಡಿಕೊಂಡಿರುವುದಿಲ್ಲ. ಪ್ರಸ್ತುತ ಪ್ರಕರಣವನ್ನು ನನ್ನ ಪರವಾಗಿ ನಡೆಸುವ ವಕೀಲರು ಸದರಿ ದಾವೆಯಲ್ಲಿ ಸಹ ನನ್ನ ಪರವಾಗಿ ನಡೆಸುತ್ತಾರೆ ಎಂದರೆ ಸರಿಯಲ್ಲ.

2. ಆನಂದ್ ಎಂಬುವವರು ನನ್ನ ವಿರುದ್ಧ ಚೆಕ್ ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದ ಸಿಸಿ ನಂಬರ್ 1521/2025 ಆಗಿರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ ಎಂದರೆ ಸರಿ. ನನ್ನ ವಿರುದ್ಧ ಮದ್ದೂರಿನ ನ್ಯಾಯಾಲಯದಲ್ಲಿ ಪುಟ್ಟಸ್ವಾಮಿ ಎಂಬುವವರು ಓ.ಎಸ್. ನಂ. 114/2023 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ದಾವೆಯ ದಾಖಲೆಯಲ್ಲಿ ಇರುವ ವಿಳಾಸ ನನ್ನದು ಎಂದರೆ ಸರಿ. ನ್ನನ ವಿರುದ್ಧ ಜಾರಿ ಅರ್ಜಿ ಸಂಖ್ಯೆ 113/2024 ರಂತೆ ಮದ್ದೂರಿನ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ಪಹಣಿಗಳು ಪಿರ್ಯಾದುದಾರರ ಸ್ವತ್ತಿಗೆ ಸಂಬಂಧಿಸದ್ದಾಗಿದ್ದು, ಅದರಲ್ಲಿ ಪಿರ್ಯಾದುದಾರರು ಸಾಲ ಪಡೆದ ಬಗ್ಗೆ ನಮೂದು ಆಗಿಲ್ಲ ಎಂದರೆ ಸರಿ. ನಾನು ದುಡಿದು ನಮ್ಮ ಕುಟುಂಬವನ್ನು ಸಾಕುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾನು ರಾಮಂದೂರು ಗ್ರಾಮದಲ್ಲಿ ವಾಸವಿರುತ್ತೇನೆ. ನಮ್ಮ ಕುಟುಂಬದಲ್ಲಿ 9 ಜನ ಸದಸ್ಯರು ಇರುತ್ತೇವೆ. ನಮ್ಮ ಕುಟುಂಬಕ್ಕೆ ಸೇರಿದಂತೆ ಆರುವರೆ ಎಕರೆ ಜಮೀನು ಇದ್ದು, ಭಾಗ ಆಗಿರುವುದಿಲ್ಲ. ನನ್ನ ಹೆಸರಿನಲ್ಲಿ ಜಮೀನು ಇರುವುದಿಲ್ಲ. ಸದರಿ ಜಮೀನಿನಿಂದ ಆದಾಯ ಬರುತ್ತಿದೆ ಎಂದು ತೋರಿಸಲುಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ ಎಂದರೆ, ಆರ್.ಟಿ.ಸಿ.ಯನ್ನು ಹಾಜರುಪಡಿಸಿರುತ್ತೇನೆ. ಸದರಿ ಆರ್.ಟಿ.ಸಿ.ಯಲ್ಲಿ ಆದಾಯದ ಬಗ್ಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ನನ್ನ ಆದಾಯದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ವೇತನ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದು 2022 ನೇ ಸಾಲಿನದ್ದಾಗಿರುತ್ತದೆ. ನನಗೆ ಪ್ರತಿ ತಿಂಗಳು 13 ಸಾವಿರ ವೇತನ ಬರುತ್ತಿತ್ತು. ನಿಡಿ 1 ಮತ್ತು 2 ರ ಪ್ರಕಾರ ನನಗೆ 11 ಸಾವಿರ ಚಿಲ್ಲರೆ ವೇತನ ಬರುತ್ತಿತ್ತು ಎಂದರೆ ಸರಿ. ನಾನು ನಮ್ಮ ಸಂಸ್ಥೆಯಲ್ಲಿ ಸಾಲ ಮಾಡಿರುತ್ತೇನೆ ಎಂದರೆ ಸರಿ. ನಾನು ನನ್ನ ಸಂಪಾದನೆಯಲ್ಲಿ ಉನ್ನತ ಮಟ್ಟದ ಜೀವನವನ್ನು ನಡೆಸುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಸಾಲ ಮಾಡುವ ದರದ್ದನ್ನು ಹೊಂದಿರುವುದಿಲ್ಲ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಬರುತ್ತಿದ್ದ ಅಲ್ಪ ಆದಾಯದಿಂದ ಜೀವನ ನಡೆಸಲು ಕಷ್ಟವಾಗಿ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ನಾನು ಪ್ರಸ್ತುತವಾಗಿ ಸಾಲ ಮಾಡಿ ಜೀವನ ನಿರ್ವಹನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

4. ಫಿರ್ಯಾದುದಾರರಿಗೆ ಜಮೀನು ಮತ್ತು ಮನೆ ಇರುತ್ತದೆ ಎಂದರೆ ಸರಿಯಲ್ಲ. ಅವರ ಕುಟುಂಬದಲ್ಲಿ ಅವರು ಮತ್ತು ಅವರ ಪತ್ನಿ ದುಡಿಯುತ್ತಾರೆ ಎಂದರೆ ಸರಿಯಲ್ಲ. ಫಿರ್ಯಾದುದಾರರ ವಿರುದ್ದ ಸಾಲದ ಸಂಬಂಧವಾಗಿ ಪ್ರಕರಣ ದಾಖಲಾಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಫಿರ್ಯಾದುದಾರರು ಸಾಲ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಫಿರ್ಯಾದುದಾರರು ಸುಮಾರು 15 ವರ್ಷಗಳಿಂದ ಚೀಟಿ ವ್ಯವಹಾರ ಮಾಡುತ್ತಿದ್ದಾರೆ. ಆ ಸಂಬಂಧವಾಗಿ ನಾನು ದಾಖಲೆ ಹಾಜರುಪಡಿಸಿರುವುದಿಲ್ಲ. ಫಿರ್ಯಾದುದಾರರು ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದು ಸಾಕ್ಷಿದಾರರ ವಿಚಾರಣೆ ಮಾಡಿಸಲು ಆಗುವುದಿಲ್ಲ. ನಾನು ಫಿರ್ಯಾದುದಾರರ ಬಳಿ 2 ಲಕ್ಷ ರೂಪಾಯಿಗೆ ಚೀಟಿ ಹಾಕಿದ್ದೆ. 2020 ಫೆಬ್ರುವರಿಯಲ್ಲಿ ಚೀಟಿಯನ್ನು ಹಾಕಿದ್ದೆ ಅದು 2021 ಸೆಪ್ಟೆಂಬರ್ ನಲ್ಲಿ ಮುಕ್ತಾಯವಾಗಿರುತ್ತದೆ. ನಾನು ಚೀಟಿ ಹಾಕಿದ್ದೆ ಎಂಬ ಸಂಬಂಧವಾಗಿ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಚೀಟಿ ಹಾಕದೇ ಇದ್ದ ಕಾರಣ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅದು ತಿಂಗಳ ಚೀಟಿಯಾಗಿತ್ತು. ಸದರಿ ಚೀಟಿಗೆ ಎಷ್ಟು ಜನ ಸದಸ್ಯರು ಇದ್ದರು ಮತ್ತು ಎಲ್ಲಿ ನಡೆಯುತ್ತಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಅವರ ಗ್ರಾಮದಲ್ಲಿ ನಡೆಯುತ್ತಿತ್ತು. ನಾನು ಸದರಿ ಚೀಟಿ ವ್ಯವಹಾರದಲ್ಲಿ ಭಾಗವಹಿಸುತ್ತಿರಲಿಲ್ಲ ಅವರೇ ಬಂದು ನಮ್ಮ ಕಛೇರಿಯಲ್ಲಿ ಪಡೆದು ಹೋಗುತ್ತಿದ್ದರು. ನಾನು ಪ್ರತಿ ತಿಂಗಳು 14 ನೇ ತಾರೀಖು 10 ಸಾವಿರ

ರೂಪಾಯಿಗಳನ್ನು ಪಿರ್ಯಾದುದಾರರಿಗೆ ಕೊಡುತ್ತಿದ್ದೆ. ನಾನು 13 ನೇ ಚೀಟಿಯನ್ನು ತೆಗೆದುಕೊಂಡಿರುತ್ತೇನೆ. ಸದರಿ ಚೀಟಿ ಮೊತ್ತವು 1,60,000/- ರೂಪಾಯಿ ಬಂದಿದ್ದು, ಅವರು ಭದ್ರತೆಗೆ 02 ಚೆಕ್‌ಗಳು ಮತ್ತು ಒಂದು ಪ್ರೊನೋಟ್‌ನ್ನು ಪಡೆದಿರುತ್ತಾರೆ. ನಾನು ಸದರಿ ಸಂಗತಿಗಳನ್ನು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ಚೀಟಿ ವ್ಯವಹಾರ ಮಾಡುವುದಿಲ್ಲ ಮತ್ತು ನನ್ನಿಂದ ಚೆಕ್‌ಗಳು ಮತ್ತು ಪ್ರೊನೋಟ್‌ನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

5. ಚೀಟಿ ಕಟ್ಟುತ್ತಿದ್ದರೆ ಪುಸ್ತಕಕ್ಕೆ ಬರೆದುಕೊಡುತ್ತಾರೆ ಎಂದರೆ ಸದರಿ ಪುಸ್ತಕವು ಪಿರ್ಯಾದುದಾರರ ಬಳಿ ಇರುತ್ತದೆ. ಸಾಮಾನ್ಯವಾಗಿ ಚೀಟಿ ಕಟ್ಟುವ ವ್ಯಕ್ತಿಯ ಬಳಿ ಸದರಿ ಪುಸ್ತಕ ಇರುತ್ತದೆ ಎಂದರೆ ಅವರು ನನಗೆ ಕೊಡದೇ ಅವರೇ ಇಟ್ಟುಕೊಂಡಿದ್ದರು. ಪಿರ್ಯಾದುದಾರರು ನನ್ನಿಂದ ಯಾವುದೇ ಚೀಟಿಯ ಮೊತ್ತವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ದಿ: 14.03.2022 ರಂದು ನಾನು ಪಿರ್ಯಾದುದಾರರನ್ನು ಭೇಟಿ ಮಾಡಿ 04 ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಮೊತ್ತವನ್ನು 2 ತಿಂಗಳ ಒಳಗಾಗಿ ವಾಪಸ್ ಮಾಡುವುದಾಗಿ ಹೇಳಿದ್ದೆ ಎಂದರೆ ಸರಿಯಲ್ಲ. ನಾನು 2 ತಿಂಗಳ ಒಳಗಾಗಿ ಹಣವನ್ನು ಪಾವತಿ ಮಾಡದ ಕಾರಣ ಒಂದು ಚೆಕ್‌ನ್ನು ಪಿರ್ಯಾದುದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್‌ನ್ನು ಬ್ಯಾಂಕ್‌ಗೆ ಹಾಜರುಪಡಿಸಿ, ಹಣ ಪಡೆಯುವಂತೆ ನಾನು ಪಿರ್ಯಾದುದಾರರಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ಸದರಿ ಚೆಕ್ ಅಮಾನ್ಯಗೊಂಡ ನಂತರ ಪಿರ್ಯಾದುದಾರರು ನನ್ನನ್ನು ಭೇಟಿ ಮಾಡಿದ್ದರು ಎಂದರೆ ಸರಿಯಲ್ಲ. ಪಿರ್ಯಾದುದಾರರು ನನಗೆ ನೋಟೀಸ್ ನೀಡಿದ್ದು, ಅದು ಜಾರಿಯಾಗಿದೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ಜಾರಿಯಾದರೂ ಸಹ ನಾನು ಉತ್ತರ ಕೊಡದ ಕಾರಣ ಈ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆನಂದ್‌ರವರಿಗೂ ಈ ದೂರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆನಂದ್‌ರವರಿಗೂ ಮತ್ತು ಪಿರ್ಯಾದುದಾರರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ತೊಂದರೆ ಕೊಡಲು ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿ: 14.03.2022 ಮತ್ತು 14.05.2022 ರಂದು ಕರ್ತವ್ಯದಲ್ಲಿ ಇದ್ದೆ ಎಂಬ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಕಿರುಗಾವಲಿನ ಕಛೇರಿಯಲ್ಲಿ ಇದ್ದೆ. ಪಿರ್ಯಾದುದಾರರಿಗೆ ಹಣವನ್ನು ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ಧೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಗೆ ಮೋಸ ಮಾಡಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಲದ ಮರುಪಾವತಿಗಾಗಿ ಪಿರ್ಯಾದುದಾರರಿಗೆ ಚೆಕ್ ನೀಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.